56 30 ರವರೆಗೆ ಅಭಿವೃದ್ಧಿಗೊಳಿಸಲು ರೂ 42 00 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಗುತ್ತಿಗೆದಾರರನ್ನು ನಿಗಧಿಪಡಿಸಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ

3) ಗೌರಿಬಿದನೂರು ತಾಲ್ಲೂಕು ಗೌರಿಬಿದನೂರು ತಾಲ್ಲೂಕಿನಲ್ಲಿ ಸದರೀ ರಾಜ್ಯ ಹೆದ್ದಾರಿಯು ಸರಪಳಿ 56 30 ಕಿ ಮೀ ರಿಂದ ಪ್ರಾರಂಭಗೊಂಡು ಸರಪಳಿ 88 10 ಕಿ ಮೀ ವರೆಗೆ ಇರುತ್ತದೆ ಸದರೀ ಸರಪಳಿಯಲ್ಲಿ 3 ವರ್ಷಗಳ (2005–08) ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ನಡಿ ಟಂಡರ್ ಆಧಾರದ ಮೇಲೆ ಆಯ್ದ ಭಾಗಗಳಲ್ಲಿ ಒಟ್ಟು 10 57 ಕಿ ಮೀ ಮರು ಡಾಂಬರೀಕರಣ ಹಾಗೂ 2 88 ಕಿ ಮೀಗಳ ರಸ್ತೆಯನ್ನು ಬಲಪಡಿಸಿ ಡಾಂಬರೀಕರಣ ಮಾಡಲಾಗಿರುತ್ತದೆ 38 10 ಕಿ ಮೀನ ಕೆಲವು ಭಾಗಗಳು ದುಸ್ಥಿತಿಯಲ್ಲಿದ್ದು, ಈ ಕುರಿತು ಅನುದಾನ ಲಭ್ಯತೆಯನ್ನು ಆಧರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು

ಇ) ಈ ರಾಜ್ಯ ಹೆದ್ದಾರಿಯನ್ನು ಸೂಕ್ತ ಅನುದಾನ ಲಭ್ಯತೆಯನ್ನು ಆಧರಿಸಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು

1529 (2069) ಶ್ರೀ ಎನ್ ಹೆಚ್ ಶಿವಶಂಕರ್ ರೆಡ್ಡಿ (ಗೌರಿಬಿದನೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದ್ದು, ಯಾವ ಯಾವ ನಗರಗಳನ್ನು ಉಪ ನಗರಗಳನ್ನಾಗಿ ಅಭಿವೃದ್ಧಿ ಪಡಿಸಲಾಗುವುದು (ವಿವರ ಒದಗಿಸುವುದು)

ಆ) ಇದರ ಅಭಿವೃದ್ಧಿಗೆ ಸರ್ಕಾರವು ವ್ಯಯ ಮಾಡುತ್ತಿರುವ ಅನುದಾನವೆಷ್ಟು,

ಇ) ಯಾವ ಅವಧಿಯಲ್ಲಿ ಅಭಿವೃದ್ಧಿಗೊಳಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) 1) ನಂದಗುಡಿ ಹೋಬಳಿ ಹೊಸಕೋಟೆ ತಾಲ್ಲೂಕು

2) ರಾಮನಗರ, ಕಸಬಾ ಹೋಬಳಿ

3) ಬಿಡದಿ ಹೋಬಳಿ, ರಾಮನಗರ ತಾಲ್ಲೂಕು

4) ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು

5) ಸಾತನೂರು ಹೋಬಳಿ, ಕನಕಪುರ ತಾಲ್ಲೂಕು

ಈ ಐದು ಉಪನಗರಗಳ ಪೈಕಿ ಪ್ರಾರಂಭಿಕವಾಗಿ ಬಿಡದಿ ಉಪನಗರವನ್ನು ಅಭಿವೃದ್ಧಿಪಡಿಸಲು ಆದೇಶಿಸಿದೆ

ಆ) ಈ ಉಪನಗರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗುವುದು ಈ ಉಪನಗರಗಳ ಅಭಿವೃದ್ಧಿಗಾಗಿ ಯಾವುದೇ ಅನುದಾನ ಸರಕಾರದಿಂದ ಒದಗಿಸಿರುವುದಿಲ್ಲ

ಇ) ಈ ಮೇಲ್ಕಂಡ ಐದು ಉಪನಗರಗಳನ್ನು ಹಂತ ಹಂತವಾಗಿ ಅತಿ ಶೀಘ್ರದಲ್ಲಿ ಅಭಿವೃದ್ಧಿಗೊಳಿಸಲು ಸೂಕ್ತ ಕ್ರಮಗಳನ್ನು ವಹಿಸಲಾಗುತ್ತಿದೆ ಈ ಪೈಕಿ ಮೊದಲನೆಯದಾಗಿ ಬಿಡದಿ ಉಪನಗರವನ್ನು ಮುಂದಿನ ಐದು ವರ್ಷಗಳಲ್ಲಿ ಸರ್ವ ರೀತಿಯಲ್ಲಿ ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ ಅದರಂತೆ ಮುಂದಿನ ದಿನಗಳಲ್ಲಿ ಅವಶ್ಯಕತೆಗಳಿಗೆ ತಕ್ಕಂತೆ ಉಳಿದ ಉಪನಗರಗಳ ನಿರ್ಮಾಣವನ್ನು ಸಹ ಆದಷ್ಟು ಬೇಗನೇ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು

1530 (2070) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರ ಅವಧಿಯು ಮುಗಿದು 5–6 ತಿಂಗಳುಗಳು ಕಳೆದಿದ್ದರೂ ಸಹ ಇದುವರೆವಿಗೂ ಇದರ ಚುನಾವಣೆಗಳನ್ನು ನಡೆಸದೇ ಇರಲು ಕಾರಣವೇನು, ಹಾಗೂ ಇರುವ ತೊಡಕುಗಳಾದರೇನು,

ಆ) ಚುನಾವಣೆಗಳು ನಡೆಯದೇ ಪಾಲಿಕೆಗಳಲ್ಲಿ ಕೆಲಸ ಕಾರ್ಯಗಳು ಸಕಾಲದಲ್ಲಿ ಆಗದೇ ಜನತೆಗೆ ತೀವ್ರ ರೀತಿಯ ತೊಂದರೆಯಾಗುತ್ತಿರುವುದು ನಿಜವಲ್ಲವೇ,

ಇ) ಹಾಗಿದ್ದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸಕಾಲದಲ್ಲಿ ನಡೆಸಿ ಜನತೆಗೆ ಅನುಕೂಲ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು?